ಡೆಪ್ಯುಟಿಗಳೇನೋ ಎಂಬಂತೆ ಕೆಲವರು ಅವನ್ನು ಭಾವಿಸಿದ್ದರು. ಹಾಗಾಗಿ ಅವುಗಳಿಗೆ ಯಥೋಚಿತ ಮರ್ಯಾದೆಯನ್ನೂ ಕೊಡುತ್ತಿದ್ದರು. 'ಮೇಡಂ ನಿಮ್ಮ ಲೂಸಿ ತುಂಬಾ ನಾಟಿ. ನನ್ನ ಹತ್ತಿರಾನೇ ಸುತ್ತ ಮುತ್ತಲೇ ಕುಣಿದು ಕುಣಿದು ಬರುತ್ತಿದ್ದಳು...' ಎಂದಲ್ಲಿ ಅವರಿಗೆ ಖುಷಿ. ಆದರೆ ಅದರ ಕಚ್ಚಾ ರೂಪದಲ್ಲಿ ಅಂದರೆ, 'ಏನು ಮೇಡಂ ನಿಮ್ಮ ನಾಯಿ ರಸ್ತೇಲೆಲ್ಲಾ ಎಗರಿ ನನ್ನ ಮೈ ಮೇಲೇ ಬರುತ್ತೆ, ನನ್ನ ಮೈಯೆಲ್ಲಾ ನಡುಗಿ ಹೋಯ್ತು' ಅಂತ ಅಂದು ಬಿಟ್ಟರೆ ಮುಗೀತು ಕಥೆ. ಈ ಕಥೆ ಮುಗಿಯಬಾರದೆಂದೇ ಅವರ ಸಬಾರ್ಡಿನೇಟ್‌ಗಳು ಜೀವ ರಕ್ಷಕ ಔಷಧಿಗಳಂತೆ ಕಡಿಮೆ ದರದಲ್ಲಿ ಮಾತಾಡಿಕೊಂಡಿದ್ದರು. ಏನೋ ಮೇಡಂಗಂತೂ ನಾಯಿ ಮತ್ತು ಮನುಷ್ಯರ ನಡುವೆ ವ್ಯತ್ಯಾಸ ಕಾಣುತ್ತಿರಲಿಲ್ಲ. ಇನ್ನು ನಾಯಿಯ ನಂತರ ಹಾವಿಗೆ ಬರುವುದಾದರೆ, ಹಾವು ಹಿಡಿಯುವ ಪರಿಣತರೆಲ್ಲ ಸಾಮಾನ್ಯವಾಗಿ ತಾವು ಹಿಡಿದ ಹಾವುಗಳನ್ನು 'ಹಾವು' ಎಂದು ಕರೆಯುವುದಿಲ್ಲ. ಅವರು ಇವರು, ಮಾರಾಜರು, ಸ್ವಾಮಿಗಳು ಎಂದೇ ಗೌರವಪೂರ್ಣವಾಗಿ ಬಹುವಚನದಿಂದ ಹೇಳುತ್ತಿರುತ್ತಾರೆ. ಒಮ್ಮೆ ಹೀಗೆ ಹಾವು ಹಿಡಿಯುವ ಪರಿಣತರೊಬ್ಬರನ್ನು ರೇಡಿಯೊಗಾಗಿ ಸಂದರ್ಶನ ಮಾಡಿದ್ದೆ. ನಂತರ ಮರೆತೂ ಇದ್ದೆ. ಒಂದು ಮಧ್ಯಾಹ್ನ ಆ ಉರಗ ತಜ್ಞ ನನ್ನ ರೂಂ ಪ್ರವೇಶಿಸಿ 'ಸಾರ್ ಅವರನ್ನ ಕರಕೊಂಬಂದಿದ್ದೀನಿ. ಆರಾಮಾಗಿ ಗಾಡೀಲಿ ಕೂತವ್ರೆ. ಒಂದು ಸಲ ನಿಮಗೆ ತೋರಿಸಿಕೊಂಡು ಹೋಗೋಣ ಅಂತ' ಎಂದು ದುಂಬಾಲು ಬಿದ್ದ. ಕೆಲಸದಲ್ಲಿ ಮಗ್ನನಾಗಿದ್ದ ನನಗೆ ಪೂರ್ತಿ ಗೊತ್ತಾಗದೆ ಅವನ ಹಿಂದೆ ಎದ್ದು ಹೋದೆ. ಅವನ ಬೈಕಲ್ಲಿ ಯಾರೂ ಇರಲಿಲ್ಲ. ಪ್ರಶ್ನಾರ್ಥಕವಾಗಿ ಅವನತ್ತ ನೋಡಿದೆ. 'ಇಲ್ಲೇ ಅವ್ರೆ ಸಾರ್ ಇಲ್ಲೇ' ಅಂದು ತನ್ನ ಬೈಕ್‌ಗೆ ಕಟ್ಟಿದ್ದ ಡಬ್ಬಿಯ ಮುಚ್ಚಳವೊಂದನ್ನು ಹೊರ ತೆಗೆದು ನನ್ನತ್ತ ತೋರಿದ. ನಾನು ಹೌಹಾರಿದೆ. ಮೂರು ಮಾರುದ್ದದ ಹಾವು. 'ಅಯ್ಯೋ ಇದನ್ನು ಇಲ್ಯಾಕೆ ತಂದ್ರಿ?' ಅವರು 'ಅವರು ಸಾರ್ ಭಾರೀ ಸಾರ್, ಸಾಮಾನ್ಯದವರಲ್ಲ. ದರ್ಶನ ಆಗ್ಲಿ ಅಂತ' ಎಂದು ನಕ್ಕ. ಎಲ್ಲವನ್ನೂ ಮನುಷ್ಯರಂತೆ ನೋಡುವ ಮತ್ತು ಮನುಷ್ಯರನ್ನು ಪದಾರ್ಥಗಳಂತೆ ಕಾಣುವ ಒಂದು ವಿಪರೀತ ಮನೋಭಾವ ಮೊದಲಿನಿಂದಲೂ ನಮ್ಮನ್ನು ಆಳುತ್ತಿದೆ. ಒಂದು ನಂಬಿಕೆ ಮೊದಲಿನಿಂದಲೂ ಅದಕ್ಕೆ ತಕ್ಕ ಹಾಗೆ ಬೆಳೆದು ಬಂದಿದೆ. ಯಾವುದಾದರೂ ಒಳ್ಳೆಯ ಕೆಲಸಕ್ಕೆ ಹೋಗುವಾಗ ಮೂರು ಜನರು ಹೋದರೆ ಆಗುವುದಿಲ್ಲ. ಹಾಗಾಗಿ ನಾಲ್ಕನೆಯವರೊಬ್ಬರನ್ನು ಕರೆದುಕೊಂಡು ಹೋಗಬೇಕು ಎಂದು. ಆದರೆ ಆ ನಾಲ್ಕನೆಯವರು ಯಾರು? ಸಾಮಾನ್ಯವಾಗಿ ಕೆಲಸವಿಲ್ಲದ ಚಿಕ್ಕ ಮಕ್ಕಳನ್ನು ಇಂತಲ್ಲಿ ಕರೆದೊಯ್ಯುತ್ತಾರೆ. ನಾನೂ ಇಂಥ ನಾಲ್ಕನೆಯ ಆಯಾಮದ ಕೆಲಸವನ್ನು ಚಿಕ್ಕವನಿದ್ದಾಗ ಮಾಡಿದ್ದು ಇದೆ. ಆದರೆ ಆ ನಾಲ್ಕನೆಯವರು ಬರಲಾಗದಿದ್ದರೆ? ಒಂದು ಕಲ್ಲು ಸಾಕು ಎಂದು ಕೈಯಲ್ಲಿ ಕಲ್ಲು ಹಿಡಿದುಕೊಂಡು ಹೋಗಿ ಕೆಲಸವಾದ ಮೇಲೆ ಅದನ್ನು ಬಿಸಾಕುತ್ತಾರೆ. ಇದನ್ನು ಸಾಕಷ್ಟು ಅನುಭವಿಸಿರುವ ನನಗೆ ಕಲ್ಲು = ನಾನು ಎಂದು ಎಷ್ಟೋ ಸಲ ಅನಿಸಿದೆ. ಹಾಗಾಗಿ 'ನಿನಗಿಂತ ಆ ಕಲ್ಲು ವಾಸಿ' ಎಂಬುದು ಈ ನಾಲ್ಕನೆ ಮನುಷ್ಯರಿಗೆ ಹೇಗೆ ಹೇಗೋ ಕೇಳುತ್ತದೆ. ಹಿಂದೊಮ್ಮೆ ನಾನು 'ನಾಲ್ಕನೆ ಮನುಷ್ಯನ ಪದ್ಯ' ಬರೆದಿದ್ದೆ. ಅದರಲ್ಲಿ ಹೇಳಿದ್ದು:

ಕಲ್ಲನ್ನು ಪ್ರತಿನಿಧಿಸುವಾಗ ಕಲ್ಲಿನಂತಿರಬೇಕು ಎದೆ
.......
ಮೂರನೆಯ ವಿಶ್ವದಲ್ಲಿ ನಾಲ್ಕನೆಯವರಿಗೆ ಬರವಿಲ್ಲ
ಮೂರಕ್ಕೆ ಸಾವಿಲ್ಲ

ಎಂಬುದಾಗಿ ನಮ್ಮಲ್ಲಿ ಪೂಜೆ ಪುನಸ್ಕಾರಗಳ ಸಮಯದಲ್ಲಿ ತೆಂಗಿನಕಾಯಿ, ಮಣ್ಣು, ಕಲ್ಲು, ಅಕ್ಕಿ, ಬೇಳೆ, ಹಣ್ಣು ಹೀಗೆ ಯಾವು ಯಾವುದನ್ನೋ ವ್ಯವಸ್ಥಿತವಾಗಿ ಜೋಡಿಸಿ ಅಲ್ಲಿ ದೇವರನ್ನು